> ಇಡೀ ಸಮಾಜವನ್ನೇ ವಾತ್ಸಲ್ಯದಿಂದ ಖಾಸಗಿಯಾಗಿಸಿಕೊಂಡ ಈ ಮೇಧಾವಿಯಲ್ಲಿ ಅಂತರಂಗ–ಬಹಿರಂಗ ಎಂಬ ಒಡಕೇ ಇರಲಿಲ್ಲ. ಹೀಗಾಗಿ ಈತ ಖಾಸಗಿಯಾಗಿ ಮಾತಾಡಿದ್ದು ಸಹಜವಾಗೇ ಸಾರ್ವಜನಿಕವಾಗಿರುತ್ತಿತ್ತು. ಸಾರ್ವಜನಿಕವಾಗಿ ಮಾತಾಡುವುದೂ ಒಂದು ಖಾಸಗೀ ಕೌಟುಂಬಿಕತೆಯಲ್ಲಿರುತ್ತಿತ್ತು.

"ಏನು ಕಾರ್ನಾಡರೆ, ಜೋರು ಚರ್ಚೆ ನಡೀತಿದೆ. ನೀವ್ಯಾಕೆ ಸುಮ್ಮನಿದ್ದೀರಿ?" ಎಂದು ಕೆಣಕಿದರು. ಆಗ ಅವರು – "ನೋಡಿ ಕಪ್ಪಣ್ಣಾ, ನಾನು ಸುಮ್ಮನಿದ್ದರೆ ನಾನು ಮೂರ್ಖ ಅಂತ ಅನ್ನಿಸ್ಕೋಬಹುದು. ಆದ್ರೆ ನಾನು ಬಾಯಿ ಹಾಕಿದ್ರೆ ಮೂರ್ಖ ಅಂತ ನಾನೇ ಪ್ರೂವ್ ಮಾಡಿದ ಹಾಗೆ ಆಗ್ತದೆ!"

ನಾನು 2000ರಲ್ಲಿ 'ಭಾವನಾ' ಎಂಬ ಮಾಸಪತ್ರಿಕೆಯನ್ನು ರೂಪಿಸುತ್ತಿದ್ದೆ. ಅದರ ಗೌರವ ಪ್ರತಿ ಅವರಿಗೂ ಕಳಿಸುತ್ತಿದ್ದೆ. ಅದರಲ್ಲಿ 'ಕಾಗದದ ದೋಣಿ' ಎನ್ನುವ ಓದುಗರ ಅಂಕಣವೊಂದಿತ್ತು. ಅದರಲ್ಲಿ ಯಾರೂ ಯಾರಿಗೂ ಕಾಗದ ಬರೆಯಬಹುದಾಗಿತ್ತು. ಆಪ್ತರೊಂದಿಗೆ ಹಳೆಯ ತಪ್ಪಿಗೆ ಬಹಿರಂಗವಾಗಿ ಕ್ಷಮೆ ಕೇಳಬಹುದಾಗಿತ್ತು, ಧನ್ಯವಾದ ಹೇಳಬಹುದಾಗಿತ್ತು. ಒಂದು ದಿನ ಸಾದಾ ಅಂಚೆಯಲ್ಲಿ ಒಂದು ಲಕೋಟೆ ಬಂತು. 'ಕಾಗದದ ದೋಣಿ' ಅಂಕಣಕ್ಕಾಗಿ – ಎಂದು ಬರೆದಿತ್ತು. ಕಳಿಸಿದವರು – ಗಿರೀಶ ಕಾರ್ನಾಡ! ಅವರು ವಿದೇಶ ಪ್ರವಾಸದಲ್ಲಿದ್ದಾಗ ಯಾವುದೋ ನಾಟಕದ ತಿಕೀಟಿಗಾಗಿ ಸಾಲಿನಲ್ಲಿ ನಿಂತಿದ್ದಾಗ ಇವರ ಮುಂದಿದ್ದ ಮಹಿಳೆಗೆ ತಿಕೀಟು ಸಿಕ್ಕಿ ಅಲ್ಲಿಗೆ ಕೌಂಟರ್ ಮುಚ್ಚಿದಾಗ – ಆಕೆ – 'ಇಲ್ಲಿಯವಳೇ ನಾನು, ನಾಳೆ ನೋಡಬಲ್ಲೆ–ನೀವು ಪ್ರವಾಸಿ ನೀವು ನೋಡಿ' ಎಂದು ಗಿರೀಶರಿಗೆ ಟಿಕೆಟ್ಟು ಕೊಟ್ಟಳಂತೆ. ಅವಳಿಗೊಂದು ಧನ್ಯವಾದದ ಕಾಗದದ ದೋಣಿಯನ್ನು ಅವರು 'ಭಾವನಾ'ಕ್ಕೆ ಕಳುಹಿಸಿದ್ದರು. ಹೀಗೆ ಸಣ್ಣದೊಂದು ಹೊಸಪತ್ರಿಕೆಯನ್ನು ಸದ್ದಿಲ್ಲದೆ ಅವರು ಹುರಿದುಂಬಿಸಿದ ರೀತಿ – ಅಪ್ಪಟ ಅವರದೇ ಆಗಿತ್ತು.

ಐದು ವರುಷಗಳ ಹಿಂದೆ ಗೋಕರ್ಣದಲ್ಲಿ ನನ್ನ ತಂದೆಯವರ ಜನ್ಮಶತಮಾನೋತ್ಸವವನ್ನು ನಮ್ಮ ಮನೆಯ ತಾರಸಿಯ ಮೇಲೆ ಸರಳವಾಗಿ ತಿಂಗಳಿಗೊಂದು ಚಟುವಟಿಕೆ ಮಾಡುವುದರ ಮೂಲಕ ಗೋಕರ್ಣದ 'ಪರ್ಣಕುಟಿ ಬಳಗ' ಆಯೋಜಿಸಿತ್ತು. ಆಗ ಗಿರೀಶ್ ಪ್ರೀತಿಯಿಂದ ಬಂದು ಒಂದು ದಿನ ತಂಗಿದ್ದು, ಪಾಲ್ಗೊಂಡರು. ರಹಮತ್ ತರೀಕೆರೆಯವರೂ ಸಪತ್ನೀಕರಾಗಿ ಬಂದಿದ್ದರು. ಆ ಕಾರ್ಯಕ್ರಮದಲ್ಲಿ ಗಿರೀಶ್ ಆಗಷ್ಟೆ ಹೊರಬಂದಿದ್ದ ಅವರ ಆತ್ಮಕಥನದ ಒಂದೆರಡು ಅಧ್ಯಾಯ ಓದಿದರು. ಅವರಿಗೆಲ್ಲ ನನ್ನ ಸ್ನೇಹಿತರೊಬ್ಬರ ಅತಿಥಿ ಗೃಹದಲ್ಲಿ ರೂಮು ಏರ್ಪಡಿಸಿದ್ದೆವು. ಆದರೆ ಅದು ಗುಡ್ಡದ ತಪ್ಪಲಿನ ಜಾಗವಾದ್ದರಿಂದ ತುಂಬಾ ಸೆಕೆಯಿತ್ತು. ಗಿರೀಶರು ಬೆವೆತು ಹೈರಾಣಾಗಿ ಕೆಂಪುಕೆಂಪಾಗಿ ಬಿಟ್ಟಿದ್ದರು. ಅವರು ಬೆವರುವುದು ಜಾಸ್ತಿಯಂತೆ. "ಬೆವರ್ ಸುರಿಸಿ ಬರವಣಿಗೆ ಮಾಡಾಂವ ನಾನೊಬ್ಬನೆ!" – ಅಂತಿದ್ರು. ರೂಮು ಬದಲಾಯಿಸಲೇಬೇಕು ಎಂದರು. ಆದರೆ ಸಂಜೆ ನಮ್ಮ ಮನೆಯಲ್ಲಿ ಕಾರ್ಯಕ್ರಮದುದ್ದಕ್ಕೂ ಬೀಸುತ್ತಿದ್ದ ಸಮುದ್ರದ ಗಾಳಿಯಿಂದ ತುಂಬಾ ಪ್ರಸನ್ನಗೊಂಡರು. "ಇಷ್ಟು ಗಾಳಿ ಕುಡದೇನಿ ಇಲ್ಲಿ. ಸಾಕು. ರಾತ್ರಿ ರೂಮು ಬದಲಾಯ್ಸುದು ಬೇಡ" – ಎಂದರು.

ರಂಗಶಂಕರದಲ್ಲಿ ಅವರ ಧ್ವನಿಯಲ್ಲಿ ಬರುವ "ಪ್ರಯೋಗದಲ್ಲಿ ವ್ಯತ್ಯಯ ಬರದಂತೆ ನಿಮ್ಮ